

ಪ್ರತಿ ದಿನ ಡೈರಿ ಬರೆಯುವುದು ಒಳ್ಳೆಯದೇ, ಆದರೆ...

ಅಮೆರಿಕದ ಅಧ್ಯಕ್ಷರಾದವರ ಪರವಾಗಿ ಅವರ ಸೆಕ್ರೆಟರಿಗಳು ಬರೆದ ಡೈರಿಗಳು Presidential Daily Diary ಎಂದು ಪ್ರಕಟವಾಗಿವೆ. ಈ ಡೈರಿಗಳಲ್ಲಿ ಅವರ ಕಾರ್ಯಕ್ರಮ, ಮೀಟಿಂಗ್‌ಗಳ ಬಗ್ಗೆ ಪ್ರಸ್ತಾಪವಿದೆಯೇ ಹೊರತು ಖಾಸಗಿ ಸಂಗತಿಗಳ ವಿವರಗಳಿಲ್ಲದಿರುವುದರಿಂದ ನೀರಸ. ಜಾರ್ಜ್ ವಾಷಿಂಗ್ಟನ್ ಹಾಗೂ ಜಾನ್ ಆ್ಯಡಮ್ಸ್ ಬರೆದ ಡೈರಿಗಳು ಮಾತ್ರ ಆಗಾಗ ಪ್ರಸ್ತಾಪವಾಗುತ್ತಿರುತ್ತವೆ.

ಇದೇ ಅಂತರಂಗ ಸುದ್ದಿ

ವಿಶ್ವೇಶ್ವರ ಭಟ್

vbhat@me.com

‘ಎಲ್ಲರೂ ಓದುವ ಸಾಹಿತ್ಯವೆಂದರೆ ಪತ್ರ ಸಾಹಿತ್ಯ’ ಎಂದು ಪತ್ರಕರ್ತ ವೈಯೆನ್ಕೆ ಹೇಳುತ್ತಿದ್ದರು. ‘ಅತ್ಯಂತ ಜನ ಪ್ರಿಯ ಸಾಹಿತ್ಯ ಅಂದ್ರೆ ಪ್ರೇಮ ಪತ್ರ ಸಾಹಿತ್ಯ’ ಎಂಬುದೂ ಅವರ ಉಕ್ತಿಯೇ. ‘ಆಕೆ ನನಗೆ (ಪ್ರೇಮ) ಪತ್ರ ಬರೆದಿದ್ದಳು, ನನಗೆ ಓದಲು ಆಗಿಲ್ಲ. ಓದಲು ಪುರಸೊತ್ತು ಸಿಕ್ಕಿಲ್ಲ’ ಎಂದು ಯಾರೂ ಹೇಳಲಿಕ್ಕಿಲ್ಲ. ಪತ್ರವನ್ನು ಯಾರೇ ಬರೆಯಲಿ, ಅದನ್ನು ಎಲ್ಲರೂ ಓದಲು ತವಕಿಸುತ್ತಾರೆ. ಬೇರೆಯವರ ಪತ್ರವನ್ನು ಓದುವುದು ಕೆಟ್ಟ ಅಭ್ಯಾಸ ಎಂಬುದು ಗೊತ್ತಿದ್ದರೂ, ಅವುಗಳನ್ನು ಓದದಿರಲು ಸಾಧ್ಯವೇ ಇಲ್ಲ. ಪತ್ರ ಬರೆದವರು ಯಾರೇ ಇರಲಿ, ಅದನ್ನು ಓದದಿದ್ದರೆ ಸಮಾಧಾನವಿಲ್ಲ.

ಇತ್ತೀಚೆಗೆ ಧಾರವಾಡದಲ್ಲಿ ನಡೆದ ಸಾಹಿತ್ಯ ಸಂಭ್ರಮದಲ್ಲಿ ಖ್ಯಾತ ಸಾಹಿತಿಗಳು ಅಂದಿನ ತಮ್ಮ ಸಮಕಾಲೀನ ಮಿತ್ರರಿಗೆ, ಸಾಹಿತಿಗಳಿಗೆ ಬರೆದ ಪತ್ರಗಳನ್ನು ಸಂಗ್ರಹಿಸಿ ಪ್ರದರ್ಶನಕ್ಕಿಡಲಾಗಿತ್ತು. ಆ ಎಲ್ಲ ಪತ್ರಗಳನ್ನು ಓದಿ ನಾನು Man of Letters ಎಂದು ಸಮಾಧಾನಪಟ್ಟುಕೊಂಡೆ. ಅನಂತಮೂರ್ತಿಯವರು ಕುರ್ತಕೋಟಿ ಅವರಿಗೆ ಬರೆದ ಪತ್ರದಲ್ಲಿ ‘ನೀವು ನನ್ನ ಮಾತಿಗೆ ಕೆಂಪು ಶಾಯಿಯಲ್ಲಿ ಷರಾ ಬರೆದಿದ್ದೀರಿ ಎಂದು ಭಾವಿಸಿದ್ದೆ. ಆದರೆ ಕೊನೆಯಲ್ಲಿ ಅದು ಎಲೆ ಅಡಕೆ ಜಗಿಯುವಾಗ ಬಿದ್ದ ನಿಮ್ಮ ಉಗುಳು ಎಂಬುದು ತಿಳಿಯಿತು’ ಎಂದು ಬರೆದಿದ್ದರು. ಯಾರದೇ ಪತ್ರವಿರಬಹುದು ಅದು ನೀರಸ ಎಂಬುದಿಲ್ಲ. ಪ್ರತಿ ಪತ್ರಕ್ಕೂ ಕನಿಷ್ಠ ಒಬ್ಬ ಓದುಗ (ಯಾರಿಗೆ ಬರೆದಿದ್ದೋ ಅವರು)ನಾದರೂ ಇರುತ್ತಾನೆ, ಇರುತ್ತಾಳೆ, ಸಾಲಗಾರ ಬರೆದ ಪತ್ರಕ್ಕೂ. ಪತ್ರಸಾಹಿತ್ಯದ ಬಗ್ಗೆ ಮಹಾಪ್ರಬಂಧ ಬರೆದ ಪೊಲೀಸ್ ನಿವೃತ್ತ ಅಧಿಕಾರಿ ಡಾ.ಡಿ.ವಿ. ಗುರುಪ್ರಸಾದ ಈ ವಿಷಯದ ಬಗ್ಗೆ ಮತ್ತಷ್ಟು ಬೆಳಕು ಚೆಲ್ಲಬಹುದು.

ಪತ್ರದಷ್ಟೇ ಕುತೂಹಲಕರ ಸಾಹಿತ್ಯ ಅಂದ್ರೆ ಡೈರಿ ಸಾಹಿತ್ಯ. ಪತ್ರದಲ್ಲಿ ಕೃತ್ರಿಮವಿದ್ದೀತು. ಆದರೆ ಡೈರಿ ಮಾತ್ರ ಅಪ್ಪಟ ನಿಜ. ನಾವು ಬೇರೆಯವರಿಗೆ ಬರೆದಿದ್ದು ಪತ್ರ. ನಮಗೆ ನಾವೇ ಬರೆದುಕೊಂಡಿದ್ದು ಡೈರಿ. ಹೀಗಾಗಿ ಪ್ರತಿ ಡೈರಿಯೂ ಸ್ಫೋಟಕ. ಹೀಗಾಗಿ ಡೈರಿಯನ್ನು ಎಲ್ಲರೂ ಯಾರ ಕೈಗೂ ಸಿಗದಂತೆ ಅಡಗಿಸಿ ಇಡುತ್ತಾರೆ. ಇದು ಬೇರೆಯವರ ಕೈಗೆ ಸಿಕ್ಕರೆ ಫಜೀತಿ. ಈ ಕಾರಣಕ್ಕೆ ಬಹುತೇಕ ಮಂದಿ ಡೈರಿ ಬರೆಯುವುದೇ ಇಲ್ಲ. ಡೈರಿ ಬರೆಯುವುದು ಒಳ್ಳೆಯ ಅಭ್ಯಾಸ ಎಂದು ಗೊತ್ತಿದ್ದರೂ, ಈ ಅಭ್ಯಾಸವನ್ನು ಯಾರೂ ರೂಢಿಸಿಕೊಳ್ಳದಿರಲು ಇದೇ ಕಾರಣ. ಡೈರಿ ಬೇರೆಯವರಿಗೆ ಸಿಕ್ಕರೆ, ಓದಿದರೆ ಫಜೀತಿಯೆಂಬ ಕಾರಣಕ್ಕಾಗಿ ಎಲ್ಲರೂ ಸಂಕೇತ, ಸಂಕೇತಾಕ್ಷರ, ಸಂಕ್ಷಿಪ್ತರೂಪಗಳಲ್ಲಿ ಬರೆಯುತ್ತಾರೆ. ಇದು ಮತ್ತಷ್ಟು ಕುತೂಹಲ, ಗೊಂದಲ, ಸಂದೇಹಗಳಿಗೆ ಎಡೆ ಮಾಡಿಕೊಡುವುದುಂಟು.

The Alice In Wonderlandಎಂಬ ಮಹತ್ವದ ಕೃತಿ ಬರೆದ ಲೂಯಿಸ್ ಕೆರೊಲ್, 1855ರಿಂದ 1897ರವರೆಗೆ, ಬರೆದ ಡೈರಿಗಳನ್ನೆಲ್ಲ ಸೇರಿಸಿ, ಹದಿಮೂರು ಸಂಪುಟಗಳಲ್ಲಿ ಪ್ರಕಟಿಸಲಾಗಿದೆ. ಆ್ಯನೆ ಫ್ರಾಂಕ್ ಬರೆದ ಡೈರಿಯನ್ನು ಓದದವರು ಇರಲಿಕ್ಕಿಲ್ಲ. ಅದು ಜಗತ್ತಿನ 70 ಭಾಷೆಗಳಿಗೆ ಅನುವಾದಗೊಂಡಿದೆ.

ಖ್ಯಾತ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೈನ್‌ನ ಕೊನೆಯ ಗರ್ಲ್ ಫ್ರೆಂಡ್ ಜೊಹಾನ್ನಾ ಫಾಂಟೊವಾ ಬರೆದ 62 ಪುಟಗಳ ಮೂಲಡೈರಿ ಪ್ರತಿ ಹರಾಜಿನಲ್ಲೂ ಕೋಟ್ಯಂತರ ಡಾಲರ್‌ಗೆ ಬಿಕರಿಯಾಗುತ್ತಿದೆ. ಈ ಡೈರಿಯಲ್ಲಿ ಐನ್‌ಸ್ಟೈನ್ ಆಕೆಗೆ ಬರೆದ ಒಂದು ಕವನವೂ ಇದೆ. Einstein tried all day to compose a radio message on behalf of Israel and did not succeed in finishing it. He claims he is totally stupidಎಂದು ಆಕೆ ಬರೆಯುತ್ತಾಳೆ.

ನೆಹರು ಹೊರತಾಗಿ ಬೇರೆ ಯಾವ ರಾಜಕಾರಣಿಗಳಿಗೂ ಡೈರಿ ಬರೆಯುವ ಹವ್ಯಾಸವಿರಲಿಲ್ಲ. ಪ್ರಧಾನಿಯಾದ ನಂತರ ಅದನ್ನೂ ಅವರು ನಿಲ್ಲಿಸಿದರು. ರಾಮಮನೋಹರ ಲೋಹಿಯಾ ನಿರಂತರವಾಗಿ ಅಲ್ಲದಿದ್ದರೂ ಆಗಾಗ ಬರೆದಿದ್ದುಂಟು. ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ನಿಜಲಿಂಗಪ್ಪನವರು ಡೈರಿ ಅಭ್ಯಾಸ ಇಟ್ಟುಕೊಂಡಿದ್ದರು. ಅವರು ಡೈರಿಯಲ್ಲಿ ಪ್ರಸ್ತಾಪಿಸಿದ ಕೆಲವು ಪ್ರಸಂಗಗಳನ್ನು ತಮ್ಮ ಆತ್ಮಕಥೆಯಲ್ಲಿ ಮೆಲುಕು ಹಾಕಿದ್ದಾರೆ.

1912ರಲ್ಲಿ ಕಾಫ್ಕಾ ಡೈರಿಯಲ್ಲಿ ಬರೆದ ಸಾಲುಗಳು ಪ್ರಸಿದ್ಧ. 'Wrote Nothing'ಎಂದಷ್ಟೇ ಅವರು ಬರೆದಿದ್ದರು. ಡೈರಿ ಬರೆಯುವ ಅಪಾಯದ ಬಗ್ಗೆ ಅವರಿಗೆ ಗೊತ್ತಿದ್ದಿರಬಹುದು.

ಅಮೆರಿಕದ ಅಧ್ಯಕ್ಷರಾದವರ ಪರವಾಗಿ ಅವರ ಸೆಕ್ರೆಟರಿಗಳು ಬರೆದ ಡೈರಿಗಳು Presidential Daily Diary ಎಂದು ಪ್ರಕಟವಾಗಿವೆ. ಈ ಡೈರಿಗಳಲ್ಲಿ ಅವರ ಕಾರ್ಯಕ್ರಮ, ಮೀಟಿಂಗ್‌ಗಳ ಬಗ್ಗೆ ಪ್ರಸ್ತಾಪವಿದೆಯೇ ಹೊರತು ಖಾಸಗಿ ಸಂಗತಿಗಳ ವಿವರಗಳಿಲ್ಲದಿರುವುದರಿಂದ ನೀರಸ. ಜಾರ್ಜ್ ವಾಷಿಂಗ್ಟನ್ ಹಾಗೂ ಜಾನ್ ಆ್ಯಡಮ್ಸ್ ಬರೆದ ಡೈರಿಗಳು ಮಾತ್ರ ಆಗಾಗ ಪ್ರಸ್ತಾಪವಾಗುತ್ತಿರುತ್ತವೆ.

ಮೂರು ಮುದುಕರು

ಓಶೋ ಹೇಳಿದ ಈ ಮೂವರು ವೃದ್ಧರ ಕತೆಯನ್ನು ಕೇಳಿ. ಒಬ್ಬರಿಗೆ ಎಪ್ಪತ್ತು ವರ್ಷ, ಮತ್ತೊಬ್ಬರಿಗೆ ಎಂಬತ್ತು, ಮೂರನೆಯವರಿಗೆ ತೊಂಬತ್ತು ವರ್ಷ. ಮೂರೂ ಜನ ಸ್ನೇಹಿತರು ನಿವೃತ್ತರಾಗಿ, ಪಾರ್ಕಿನಲ್ಲಿ ಸುತ್ತಾಡಿ ಕಲ್ಲುಬೆಂಚಿನ ಮೇಲೆ ಕುಳಿತು ಲೋಕಾಭಿರಾಮವಾಗಿ ಹರಟುತ್ತಿದ್ದರು. ಅವರಲ್ಲೇ ಕಿರಿಯರಾದ ಎಪ್ಪತ್ತರ ವೃದ್ಧರು ತುಂಬಾ ಬೇಸರಗೊಂಡವರಂತೆ ಇದ್ದರು. ಎಂಬತ್ತರ ವೃದ್ಧರು ಅವರನ್ನು ಕುರಿತು, ‘ಏನು ವಿಷಯ ತುಂಬಾ ಬೇಸರದಲ್ಲಿರುವಂತಿದೆಯಲ್ಲ?’ ಎಂದರು.

ಆಗ ಆ ಎಪ್ಪತ್ತರ ವೃದ್ಧರು ಹೇಳಿದರು ‘ನನಗೆ ತುಂಬಾ ಅಪರಾಧಿ ಭಾವ ಕಾಡುತ್ತಿದೆ. ನಿಮ್ಮೊಡನೆ ಹಂಚಿಕೊಂಡರೆ ಸ್ವಲ್ಪ ಭಾರ ಕಡಿಮೆಯಾಗಬಹುದೇನೋ. ಒಂದು ಘಟನೆ ನಡೆಯಿತು. ಒಂದು ಸುಂದರವಾದ ಹೆಣ್ಣು ನಮ್ಮ ಮನೆಗೆ ಅತಿಥಿಯಾಗಿ ಬಂದಿದ್ದಳು. ಆಕೆ ಸ್ನಾನ ಮಾಡುತ್ತಿರುವಾಗ ಸ್ನಾನದ ಮನೆಯ ಕಿಂಡಿಯೊಂದರಿಂದ ನಾನು ನೋಡುತ್ತಾ ನಮ್ಮ ತಾಯಿಯ ಕೈಗೆ ಸಿಕ್ಕಿಬಿದ್ದೆ’.

ಅವರ ಮಾತು ಕೇಳಿ ವಯಸ್ಸಾದ ಇನ್ನಿಬ್ಬರು ಮಿತ್ರರು ಬಾಯಿತುಂಬಾ ನಕ್ಕರು. ನಂತರ ‘ನೀನೊಬ್ಬ ಮೂರ್ಖ, ಎಲ್ಲರೂ ಚಿಕ್ಕಂದಿನಲ್ಲಿ ಹೀಗೆಯೇ ಮಾಡಿರುತ್ತಾರೆ’ ಎಂದರು.

ಆಗ ಅವರು ‘ಇದು ಚಿಕ್ಕ ವಯಸ್ಸಿನಲ್ಲಿ ಆಗಿದ್ದಲ್ಲ. ಇಂದು ಬೆಳಗ್ಗೆ ನಡೆದ ಘಟನೆ’ ಎಂದರು.

ಎರಡನೆಯವರು ಆಗ ‘ಹಾಗಿದ್ದರೆ ಅದು ಗಂಭೀರವಾದುದೇ ಹೀಗೆ ನನಗೂ ಕಳೆದ ಮೂರು ದಿನಗಳಿಂದ ಆಗುತ್ತಿರುವ ಅನುಭವ ಹೇಳುತ್ತೇನೆ ಕೇಳು. ಅದನ್ನು ನನ್ನ ಹೃದಯದಲ್ಲೇ ಭಾರವಾದ ಬಂಡೆಯಂತೆ ಇಟ್ಟುಕೊಂಡಿದ್ದೇನೆ. ಕಳೆದ ಮೂರು ದಿನಗಳಿಂದ ನನ್ನ ಪತ್ನಿ ಪ್ರಣಯದಾಟಕ್ಕೆ ನಿರಾಕರಿಸುತ್ತಲೇ ಇದ್ದಾಳೆ’ ಎಂದರು.

ಆಗ ಮೊದಲನೆಯವರು ‘ಇದು ನಿಜಕ್ಕೂ ಕೆಟ್ಟ ಸಂಗತಿಯೇ’ ಎಂದರು.

ಆಗ ತೊಂಬತ್ತರ ವೃದ್ಧರು ಜೋರಾಗಿ ನಗುತ್ತಾ ‘ಮೊದಲು ಅವನ ಪ್ರಣಯದಾಟ ಏನು ಎನ್ನುವುದನ್ನು ಕೇಳು’ ಎಂದರು. ಹಾಗೆ ಕೇಳಿದಾಗ ಎರಡನೆಯವರು, ಸವಿಸ್ತಾರವಾಗಿ ‘ನಾನು ಅವಳಿಂದ ಹೆಚ್ಚೇನೂ ಕೇಳುವುದಿಲ್ಲ. ನನ್ನನ್ನು ಹೆಚ್ಚು ಮುಜುಗರಕ್ಕೆ ಸಿಲುಕಿಸಬೇಡಿ. ಅದೊಂದು ಸರಳವಾದ ಕ್ರಿಯೆ ನನ್ನ ಹೆಂಡತಿಯ ಕೈ ಹಿಡಿದು, ಮೂರು ಬಾರಿ ಅಮುಕುತ್ತೇನೆ ನಂತರ ಅವಳೂ ನಿದ್ದೆ ಹೋಗುತ್ತಾಳೆ. ನಾನೂ ನಿದ್ದೆಗೆ ಜಾರಿಕೊಳ್ಳುತ್ತೇನೆ. ಆದರೆ ಕಳೆದ ಮೂರು ದಿನಗಳಿಂದ, ನಾನು ಕೈ ಹಿಡಿಯಲು ಹೋದಾಗೆಲ್ಲ, ಅವಳು ‘ಇವತ್ತು ಬೇಡ, ಇಂದು ಬೇಡ! ನನಗೆ ನಾಚಿಕೆಯಾಗುತ್ತಿದೆ. ನಿಮಗೂ ವಯಸ್ಸಾಯಿತು, ಇಂದು ಬೇಡ’ ಎಂದು ಬಿಡುತ್ತಾಳೆ. ಹೀಗೆ ಕಳೆದ ಮೂರು ದಿನಗಳಿಂದ ಆಕೆಯೊಂದಿಗೆ ಪ್ರಣಯದಾಟದಲ್ಲಿ ತೊಡಗುವುದು ನನಗೆ ಸಾಧ್ಯವಾಗಿಲ್ಲ’ ಎಂದರು.

ಆಗ ತೊಂಬತ್ತರ ವೃದ್ಧರು ಹೇಳಿದರು, ‘ಇದೆಲ್ಲಾ ಸಮಸ್ಯೆಯೇ ಅಲ್ಲ. ನನಗೆ ಆಗುತ್ತಿರುವುದನ್ನು ನಿಮ್ಮೆದುರು ನಾನು ಹೇಳಿಕೊಳ್ಳಲೇಬೇಕು. ನಿಮಗಿನ್ನೂ ಚಿಕ್ಕ ವಯಸ್ಸು. ಆದ್ದರಿಂದ ಈ ಅನುಭವ ನಿಮಗೆ ಖಂಡಿತಾ ಮುಂದೆ ಉಪಯೋಗವಾಗುತ್ತದೆ. ಕಳೆದ ರಾತ್ರಿ, ಬಹುತೇಕ ರಾತ್ರಿ ಕಳೆದು ಬೆಳಗಾಗುವ ಸಮಯದಲ್ಲಿ ನಾನು ನನ್ನ ಪತ್ನಿಯೊಂದಿಗೆ ರತಿಕ್ರೀಡೆ ಆರಂಭಿಸಿದೆ. ಕೂಡಲೇ ಅವಳು, ‘ಅಯ್ಯೋ ಮೂರ್ಖ! ಇದೇನು ಮಾಡುತ್ತಿರುವೆ?’ ಎಂದು ರೇಗಿದಳು.

ನಾನೂ ‘ನನಗೆ ಬೇಕೆನಿಸಿತು, ಆದ್ದರಿಂದ ನಿನ್ನೊಡನೆಯೇ ಪ್ರಣಯ ಚೇಷ್ಟೆ ಆರಂಭಿಸಿದೆ’ ಎಂದೆ. ಅವಳು ‘ಇದು ಈ ರಾತ್ರಿಯಲ್ಲಿ ಮೂರನೇ ಸಲ. ನೀನೂ ನಿದ್ದೆ ಮಾಡುವುದಿಲ್ಲ, ನನಗೂ ನಿದ್ರಿಸಲು ಬಿಡುವುದಿಲ್ಲ. ರಾತ್ರಿಯೆಲ್ಲಾ ಹೀಗೆ ರತಿಕ್ರೀಡೆಯಾಡುತ್ತಿದ್ದರೆ ಹೇಗೆ’ ಎಂದು ಕೂಗಾಡಿದಳು.

ಈಗ ನನಗನ್ನಿಸುತ್ತಿದೆ ‘ನನಗೆ ಅರಳು ಮರುಳು ಉಂಟಾಗಿರಬೇಕು. ನೆನಪಿನ ಶಕ್ತಿ ಕ್ಷೀಣಿಸುತ್ತಿದೆ. ನಿಮ್ಮ ಸಮಸ್ಯೆಗಳು ಇದರ ಮುಂದೆ ಏನೂ ಅಲ್ಲ. ನನ್ನ ನೆನಪಿನ ಶಕ್ತಿಯೇ ಹೊರಟು ಹೋಗುತ್ತಿದೆ’ ಎಂದರು.

ಬೇಕಾದಷ್ಟೇ ತಿನ್ನಿ

ಮನಸ್ಸಿನ ಅಂತರಾಳದಲ್ಲಿ, ಪ್ರೀತಿ ಮತ್ತು ಆಹಾರಗಳು ಒಂದಕ್ಕೊಂದು ಹೊಂದಿಕೊಂಡು ಬಿಟ್ಟಿವೆ. ಈ ಕಾರಣದಿಂದಲೇ ನೀವು ಪ್ರೀತಿಯಿಂದ ವಂಚಿತರಾದಾಗಲೆಲ್ಲ ಹೀಗೆ ತಿನ್ನುತ್ತಲೇ ಹೋಗುವಿರಿ, ಹೊಟ್ಟೆ ತುಂಬಿಸುತ್ತಲೇ ಹೋಗುವಿರಿ. ನಿಮಗೆ ಬೇಕಾದ ಪ್ರೀತಿ ದೊರೆತಾಗ, ಈ ರೀತಿ ತುಂಬಿಸುವುದು ತಾನೇ ತಾನಾಗಿ ನಿಂತು ಹೋಗುತ್ತದೆ. ಆಗ ಅದರ ಅವಶ್ಯಕತೆ ಇರುವುದಿಲ್ಲ. ಪ್ರೀತಿ ಎನ್ನುವುದು ಅಂಥ ಒಂದು ಪುಷ್ಟಿಕರವಾದ ಆಹಾರ. ತುಂಬಾ ಸೂಕ್ಷ್ಮ ಸ್ವರೂಪದ, ಕಣ್ಣಿಗೆ ಕಾಣದೇ ಪುಷ್ಟಿ ನೀಡುತ್ತಿರುವಾಗ ಯಾರು ತಾನೇ ಚ್ಯೂಯಿಂಗ್‌ಗಮ್ ಜಗಿಯುತ್ತಾರೆ.

ಮನುಷ್ಯರು ಹೀಗೆ ಚ್ಯೂಯಿಂಗ್‌ಗಮ್ ಜಗಿಯುವುದು ನಂಬಲಸಾಧ್ಯವಾದದ್ದು. ಇಡೀ ಪ್ರಪಂಚದಲ್ಲಿ ಈ ರೀತಿ ಅಗಿಯಲು ಎಲ್ಲರೂ ಹುಚ್ಚರಿರಬೇಕು. ಅದರಿಂದ ಯಾವುದೇ ಪೋಷಣೆ ಸಿಗುವುದಿಲ್ಲ. ಹಾಗಿದ್ದರೂ ಉಪಯೋಗಿಸುತ್ತಾರೆ ಎಂದ ಮೇಲೆ ಮಾನಸಿಕವಾಗಿ, ತಾಯಿಯ ಎದೆಹಾಲಿನಿಂದ ವಂಚಿತವಾದ ಸುಖವನ್ನು ಈ ರೀತಿ ಪಡೆದುಕೊಳ್ಳುತ್ತಿರಬೇಕು.

ಯಾವ ಪ್ರಾಣಿಯೂ ಮನುಷ್ಯನಂತೆ ತಿನ್ನುವುದಿಲ್ಲ. ಪ್ರತಿ ಪ್ರಾಣಿಗೂ ತನ್ನದೇ ಆದ ಆಹಾರವಿದೆ. ನೀವು ಎಮ್ಮೆಗಳನ್ನು ತಂದು ಹೂದೋಟದಲ್ಲಿ ಬಿಟ್ಟರೆ, ಅವು ಒಂದು ನಿರ್ದಿಷ್ಟ ಬಗೆಯ ಹುಲ್ಲನ್ನು ಮಾತ್ರವೇ ತಿನ್ನುತ್ತವೆ. ಸಿಕ್ಕಿದ್ದೆಲ್ಲ ತಿನ್ನುವುದಿಲ್ಲ. ಆಹಾರದ ಆಯ್ಕೆಯಲ್ಲಿ ತುಂಬಾ ಸೂಕ್ಷ್ಮವಾಗಿರುತ್ತವೆ. ಆಹಾರದೊಂದಿಗೆ ಅವು ಸಂವೇದಿಯಾಗಿರುತ್ತವೆ. ಮಾನವ ಮಾತ್ರವೇ ಈ ರೀತಿಯ ಸಂವೇದನೆಯನ್ನು ಪೂರ್ತಿಯಾಗಿ ಕಳೆದುಕೊಂಡಿದ್ದಾನೆ. ಮನುಷ್ಯನಿಂದ, ಎಲ್ಲಾದರೂ ಒಂದುಕಡೆ, ತಿನ್ನಲ್ಪಡದೆಯೇ ಇರುವ ವಸ್ತುಗಳನ್ನು ನೀವು ಕಾಣುವುದೇ ಇಲ್ಲ. ಕೆಲವು ಕಡೆ ನಾಯಿಗಳನ್ನು ತಿನ್ನುತ್ತಾರೆ, ಕೆಲವೆಡೆ ಇರುವೆಗಳನ್ನು ತಿನ್ನುತ್ತಾರೆ, ಕೆಲವೆಡೆ ಹಾವುಗಳನ್ನು ತಿನ್ನುತ್ತಾರೆ. ಮನುಷ್ಯ ಎಲ್ಲವನ್ನು ತಿಂದಿದ್ದಾನೆ. ಮನುಷ್ಯ ಈ ವಿಷಯದಲ್ಲಿ ಹುಚ್ಚನಾಗಿ ಬಿಟ್ಟಿದ್ದಾನೆ. ತನ್ನ ದೇಹಕ್ಕೆ ಯಾವುದು ಹೊಂದಿಕೆಯಾಗುತ್ತದೆ, ಇಲ್ಲ ಎನ್ನುವ ಪರಿವೆಯೇ ಇಲ್ಲ. ಸಂಪೂರ್ಣವಾಗಿ ಗೊಂದಲಗೊಂಡಿದ್ದಾನೆ. ಹೀಗೆ ಹೇಳಿದವರು

ಓಶೋ. ಈ ಎಲ್ಲ ಮಾತುಗಳು ಎಷ್ಟು ನಿಜ ಅಲ್ಲವಾ?

ಹಾಲಿವುಡ್ ಸಿನಿಮಾ ಹಾಗೂ ಮಾ

ಆಲಿಬಾಬಾ ಕಂಪನಿಯ ಮುಖ್ಯಸ್ಥ ಜಾಕ್ ಮಾ ಅವರನ್ನು ಪತ್ರಕರ್ತನೊಬ್ಬ ಕೇಳಿದನಂತೆ–‘ಇತ್ತೀಚಿನ ದಿನಗಳಲ್ಲಿ ನೀವು ಬರೀ ಹಾಲಿವುಡ್ ಸಿನಿಮಾವನ್ನು ಬಹಳ ನೋಡ್ತೀರಂತೆ, ನಿಜಾನಾ?’

ಅದಕ್ಕೆ ಜಾಕ್ ಮಾ ಹೇಳಿದರಂತೆ–‘ಹೌದು ನಿಜ. ಹಾಲಿವುಡ್ ಸಿನಿಮಾಗಳಂತೆ ಚೀನಾದ ಸಿನಿಮಾಗಳಲ್ಲೂ ಹೀರೋ ಇದ್ದಾನೆ. ಆದರೆ ಚೀನಾದ ಸಿನಿಮಾಗಳಲ್ಲಿ ಹೀರೋ ಕೊನೆಯಲ್ಲಿ ಸಾಯುತ್ತಾನೆ. ಆದರೆ ಅಮೆರಿಕನ್ ಸಿನಿಮಾಗಳಲ್ಲಿ ಹೀರೋ ಸಾಯುವುದೇ ಇಲ್ಲ. ಎಲ್ಲ ಹೀರೋಗಳು ಸಾಯುವುದಾದರೆ, ಯಾರು ತಾನೆ ಹೀರೋಗಳಾಗಲು ಬಯಸುತ್ತಾರೆ. ಈ ಕಾರಣದಿಂದ ನನಗೆ ಹಾಲಿವುಡ್ ಸಿನಿಮಾಗಳು ಇಷ್ಟವಾಗುತ್ತವೆ’.

ಯಾವುದು ಅಪಾಯಕಾರಿ?

ಬಿಯರ್‌ಗಿಂತ ಟೀ ಹೆಚ್ಚು ಡೇಂಜರಸ್!

ಹೇಗೆ ಗೊತ್ತಾ?

ನಿನ್ನೆ ಮಧ್ಯರಾತ್ರಿ ಒಂದು ಗಂಟೆ ತನಕ ಪಬ್‌ನಲ್ಲಿ ಎಂಟು ಬಾಟಲಿ ಬಿಯರ್ ಕುಡಿದೆ. ನನ್ನ ಹೆಂಡತಿ ಮನೆಯಲ್ಲಿ ಟೀ ಕುಡಿಯುತ್ತಿದ್ದಳು. ನಾನು ಮನೆಗೆ ಹೋಗುತ್ತಿದ್ದಂತೆ ಆಕೆ ರೌದ್ರಾವತಾರ ತಾಳಿದಳು. ಬಾಯಿಗೆ ಬಂದಂತೆ ಬಯ್ಯಲಾರಂಭಿಸಿದಳು. ‘ಇಂದು ಯಾವುದಕ್ಕೂ ಒಂದು ತೀರ್ಮಾನ ಆಗಲೇಬೇಕು. ಒಂದೋ ನಾನಿರಬೇಕು, ಇಲ್ಲ ನೀವಿರಬೇಕು’ ಎಂದು ಕೂಗಲಾರಂಭಿಸಿದಳು. ನಾನು ಶಾಂತವಾಗಿದ್ದೆ. ಆಕೆಯ ಎಲ್ಲ ಬಯ್ಗುಳಗಳನ್ನೂ ಕೇಳಿಸಿಕೊಂಡೆ.

ಆದರೆ ಅವಳ ಕೂಗಾಟ, ಕಿರುಚಾಟ ನಿಂತಿರಲಿಲ್ಲ. ಕೇಳುವಷ್ಟು ಕೇಳಿ, ನಂತರ ಸುಮ್ಮನೆ ಬೆಡ್‌ರೂಮಿಗೆ ಹೋಗಿ ಮಲಗಿದೆ. ಆದರೆ ಆಕೆಯ ಬಯ್ಗುಳ ಮಾತ್ರ ನಿಂತಿರಲಿಲ್ಲ.

ನಾನು ಹೇಳ್ತೀನಿ, ಟೀ ಬಹಳ ಅಪಾಯಕಾರಿ.

(ಬೆಂಗಳೂರಿನ ಪಬ್ ಒಂದರಲ್ಲಿ ಕಾಣಿಸಿದ ಪೋಸ್ಟರ್ ಇದು. ಮಗುಂಡುಗಲಿ ಮಿತ್ರರೊಬ್ಬರು ಕಳಿಸಿದ್ದು)

ಹೆಸರೇನು? ಒಳ್ಳೆಯ ಹೆಸರೇನು?

ಈ ಪ್ರಯೋಗ ಚಾಲ್ತಿಯಲ್ಲಿರೋದು ಭಾರತೀಯರಲ್ಲಿ ಮಾತ್ರ. ಅಪರಿಚಿತರು ಭೇಟಿಯಾದಾಗ ಇಂಗ್ಲಿಷಿನಲ್ಲಿ "What's your good name?' ಎಂದು ಕೇಳುತ್ತಾರೆ. ಜಗತ್ತಿನ ಬೇರೆ ಯಾವ ದೇಶದಲ್ಲೂ ಇಂಗ್ಲಿಷಿನಲ್ಲಿ ಹೀಗೆ ಕೇಳುವುದಿಲ್ಲ. ಕನ್ನಡದಲ್ಲೂ ‘ನಿಮ್ಮ ಹೆಸರೇನು?’ ಎಂದು ಕೇಳುತ್ತೇವೆ. ಅದೇ ಹಿಂದಿಯಲ್ಲಿ ‘ಆಪ್ ಕಾ ಶುಭ್ ನಾಮ್ ಕ್ಯಾ?’ ಎಂದು ಕೇಳುವುದು ಸಂಪ್ರದಾಯ. ಹಿಂದಿಯ ಶುಭನಾಮ್ ಇಂಗ್ಲಿಷಿನಲ್ಲಿ good name ಆಗಿರಲಿಕ್ಕೆ ಸಾಕು. ಎಲ್ಲ ತಂದೆ–ತಾಯಿಗಳೂ ತಮ್ಮ ಮಕ್ಕಳಿಗೆ ಒಳ್ಳೆಯ ಹೆಸರನ್ನೇ ಇಟ್ಟಿರುತ್ತಾರೆ. ಅಷ್ಟಕ್ಕೂ ಕೆಟ್ಟ ಹೆಸರು ಎಂಬುದು ಇಲ್ಲವೇ ಇಲ್ಲ. ಹೀಗಿರುವಾಗ ‘What's your good name?’ ಎಂದು ಕೇಳಬೇಕಿಲ್ಲ. "What's your name?' ಎಂದಷ್ಟೇ ಕೇಳಿ. ಯಾರೂ ತಪ್ಪು ಭಾವಿಸುವುದಿಲ್ಲ.

ಅದೇ ರೀತಿ ಭಾರತೀಯರು ಮತ್ತೊಂದು ವಿಚಿತ್ರ ಪ್ರಯೋಗ ಮಾಡುತ್ತಾರೆ. ಅದೇನೆಂದರೆ ಮದರ್ ಪ್ರಾಮಿಸ್. ಆಕ್ಸ್‌ಫರ್ಡ್ ಡಿಕ್ಷನರಿ ತೆಗೆದು ನೋಡಿ, ಮದರ್ ಪ್ರಾಮಿಸ್ ಎಂಬ ಪ್ರಯೋಗ ಕಾಣಿಸುವುದಿಲ್ಲ. ಈ ಬಳಕೆ ಹೇಗೆ ಬಂತೋ ಗೊತ್ತಿಲ್ಲ, ಆಣೆ ಪ್ರಮಾಣ ಮಾಡುವಾಗ ‘ಮದರ್ ಪ್ರಾಮಿಸ್’ ಎಂದು ಹೇಳುವುದು ಸಹಜವಾಗಿದೆ. ಕನ್ನಡದ ತಾಯಾಣೆ, ಹಿಂದಿಯ ‘ಮಾ ಕಸಮ್’ ಇಂಗ್ಲಿಷಿನಲ್ಲಿ ಯಥಾವತ್ತಾಗಿ ‘ಮದರ್ ಪ್ರಾಮಿಸ್’ ಆಗಿರಬಹುದು. ಇಂಗ್ಲಿಷಿನಲ್ಲಿ ಆಣೆ ಹಾಕುವ ಪ್ರಸಂಗ ಬಂದರೆ ಪ್ರಾಮಿಸ್ ಎಂದಷ್ಟೇ ಹೇಳಿ. ಅಲ್ಲಿ ತಾಯಿಯನ್ನು ಎಳೆದು ತರಬೇಕಿಲ್ಲ.

ತಿಂತ್ರಿಣಿ ಪುರಾಣ, ಹುಣಿಸೆ ಚಿಗಳಿ ಮತ್ತು ಚಿಲಿ ಟ್ಯಾಮರಿಂಡ್ ಬೈಟ್ಸ್

ಚಿಗಳಿಗೆ ಸರಿಸಾಟಿಯೆನಿಸುವ ಚಿಲಿ ಟ್ಯಾಮರಿಂಡ್ ಬೈಟ್ಸ್ ಸಿಕ್ಕಿರುವುದು ನನಗೆ ತುಂಬ ಖುಷಿಯಾಗಿದೆ. ಖುಷಿಯಾದಾಗ ಎಲ್ಲರಿಗೂ ಸಿಹಿ ಹಂಚಿ ಖುಷಿಯನ್ನು ಹೆಚ್ಚಿಸಿಕೊಳ್ಳುವುದು ಲೋಕರೂಢಿ, ಮಾಮೂಲಿ ಸಂಗತಿ. ಸಿಹಿಯೇ ಆಗಬೇಕಿಲ್ಲ ಹುಳಿಯನ್ನೂ ಹಂಚಬಹುದು ಎಂಬ ಆಲೋಚನೆ ಬರುವುದು ಮತ್ತು ಅನುಷ್ಠಾನಗೊಳ್ಳುವುದು ಬಹುಶಃ ತಿಳಿರುತೋರಣ ಅಂಕಣದಲ್ಲಿ ಮಾತ್ರ!

ತಿಳಿರು ತೋರಣ

ಶ್ರೀವತ್ಸ ಜೋಶಿ

srivathsajoshi@yahoo.com

‘ಅಶ್ವತ್ಥಮೇಕಂ ಪಿಚುಮಂದಮೇಕಂ ನ್ಯಗ್ರೋಧಮೇಕಂ ದಶತಿಂತ್ರಿಣೀಕಂ। ಕಪಿತ್ಥಬಿಲ್ವಾಮಲಕ ತ್ರಯಂಚ ಪಂಚಾಮ್ರರೋಪೀ ನರಕಂ ನ ಯಾತಿ॥’ ಅಂತೊಂದು ಶ್ಲೋಕವಿದೆ. ಸತ್ತ ಮೇಲೆ ನರಕಕ್ಕೆ ಹೋಗಬಾರದು ಅಂತಿದ್ದರೆ ಯಾವ್ಯಾವ ಗಿಡಗಳನ್ನು ಕನಿಷ್ಠಪಕ್ಷ ಎಷ್ಟೆಷ್ಟು ಸಂಖ್ಯೆಯಲ್ಲಿ ನೆಟ್ಟು ವೃಕ್ಷಪೋಷಣೆ ಮಾಡಬೇಕು ಎಂದು ಈ ಶ್ಲೋಕ ತಿಳಿಸುತ್ತದೆ. ಇದರ ಪ್ರಕಾರ- ಒಂದು ಅರಳಿ ಮರ, ಒಂದು ಬೇವಿನ ಮರ (ಪಿಚುಮಂದ), ಒಂದು ಆಲದ ಮರ (ನ್ಯಗ್ರೋಧ); ಹತ್ತು ಹುಣಿಸೆ ಮರ (ತಿಂತ್ರಿಣೀಕ), ತಲಾ ಮೂರು ಬೇಲ (ಕಪಿತ್ಥ), ಬಿಲ್ವ ಮತ್ತು ನೆಲ್ಲಿ ಮರ (ಆಮಲಕ), ಹಾಗೂ ಐದು ಮಾವಿನ ಮರ (ಆಮ್ರ) – ಇವಿಷ್ಟನ್ನು ಪೋಷಿಸಿದವರು ನರಕಕ್ಕೆ ಹೋಗುವುದಿಲ್ಲವಂತೆ. ರೋಪಣ ಅಂದರೆ ಗಿಡಗಳನ್ನು ನೆಟ್ಟು ಬೆಳೆಸುವುದು, ರೋಪೀ ಅಂದರೆ ಅಂಥ ಒಳ್ಳೆಯ ಕೆಲಸ ಮಾಡುವವನು ಎಂದರ್ಥ. ಇದೇ ಶ್ಲೋಕದ ಬೇರೆ ಕೆಲವು ಆವೃತ್ತಿ (ಪಾಠಾಂತರ)ಗಳಲ್ಲಂತೂ ಕೊನೆಯ ಸಾಲು ‘ಏತಾಂಶ್ಚ ದೃಷ್ಟ್ವಾ ನರಕಂ ನ ಪಶ್ಯೇತ್’ ಅಂತ ಇದೆ. ಅಂದರೆ ಈಎಲ್ಲ ಗಿಡಗಳನ್ನು ನೆಟ್ಟುಬೆಳೆಸಬೇಕು ಅಂತನೂ ಇಲ್ಲ, ಬರೀ ನೋಡಿದರೂ ಸಾಕು ನರಕವನ್ನು ನೋಡುವ ಸಂದರ್ಭ ಬರುವುದಿಲ್ಲವಂತೆ! ಅಂದಹಾಗೆ ಈ ಮರಗಳು ನಮಗೆಲ್ಲ ಚಿರಪರಿಚಿತವಾಗಿರುವಂಥವು, ಔಷಧೀಯ ಗುಣವುಳ್ಳವು ಮತ್ತು ಸನಾತನ ಸಂಸ್ಕೃತಿಯಲ್ಲಿ ಪೂಜ್ಯ ಸ್ಥಾನ ಗಳಿಸಿದಂಥವು ಎಂಬುದನ್ನು ಗಮನಿಸಬೇಕು. ಈ ಶ್ಲೋಕ ಬರುವುದು ಸ್ಕಂದ ಪುರಾಣದಲ್ಲಿ, ಹಾಗಾಗಿ ಸಹಸ್ರಾರು ವರ್ಷಗಳ ಹಿಂದಿನ ಕಾಲದಲ್ಲಿ ವೃಕ್ಷಸಂಪತ್ತು ಹೇರಳವಾಗಿದ್ದಾಗಲೇ ಮರ ಬೆಳೆಸುವುದರ ಅಗತ್ಯವನ್ನು ಪೂರ್ವಜರು ಶ್ಲೋಕದ ಮೂಲಕ ಸಾರಿದ್ದಾರೆ ಎಂಬುದನ್ನೂ ನಾವು ಗಮನಿಸಬೇಕು.

ಈ ಶ್ಲೋಕದಲ್ಲಿ ನನಗೆ ವಿಶೇಷ ಕುತೂಹಲ ಮೂಡಿಸಿದ್ದು ‘ದಶ ತಿಂತ್ರಿಣೀಕಂ’ ಹತ್ತು ಹುಣಿಸೆ ಮರಗಳ ಉಲ್ಲೇಖ. ಬೇರೆಲ್ಲ ಮರಗಳು ತಲಾ ಒಂದು, ಮೂರು, ಐದು ಇತ್ಯಾದಿ ಇದ್ದಾಗ ಹುಣಿಸೆಗೆ ಮಾತ್ರ ಹತ್ತರ ಪ್ರಾಮುಖ್ಯ! ಏಕಿರಬಹುದು? ಬಹುಶಃ ಅದರ ಬಹೂಪಯೋಗಿ ಗುಣದಿಂದಲೇ. ಕಲ್ಪವೃಕ್ಷಕ್ಕೆ ಕಮ್ಮಿಯೇನಲ್ಲ ಹುಣಿಸೆ ಮರ. ಎಂತಹ ಬರಗಾಲಕ್ಕೂ ಅಂಜದೆ ಅಳುಕದೆ ತಲೆಯೆತ್ತಿ ನಿಲ್ಲುವ, ಆಶ್ರಿತರಿಗೆ ತಂಪಾದ ನೆರಳನ್ನು ಕೊಡುವ ಮರವದು. ಜನಸಾಮಾನ್ಯರಿಗಷ್ಟೇ ಏನು ಬ್ರಹ್ಮರಾಕ್ಷಸ ಅಥವಾ ದೆವ್ವ–ಪಿಶಾಚಿ ಮುಂತಾದ ಅತಿಮಾನುಷ ಭಯಾನಕ ಶಕ್ತಿಗಳಿಗೂ ಹುಣಿಸೆ ಮರ ಆಶ್ರಯ ಕೊಡುತ್ತದೆಂದು ಪ್ರತೀತಿ. ಹುಣಿಸೆ ಹಣ್ಣಿನ ವಿವಿಧ ಉಪಯೋಗಗಳಂತೂ ನಮಗೆಲ್ಲ ಗೊತ್ತೇ ಇವೆ– ಎಳೆ ಹುಣಿಸೆಯ ತೊಕ್ಕಿನಿಂದ ಹಿಡಿದು, ಹುಣಿಸೆಯೇ ಪ್ರಧಾನವಾಗಿರುವ ಮಳಿಯೊಗರೆವರೆಗೆ; ಧನುರ್ಮಾಸದಲ್ಲಿ ಹುಗ್ಗಿಯ ಜೊತೆಗಿನ ಗೊಜ್ಜಿನಿಂದ ಹಿಡಿದು, ಸಮೋಸಕ್ಕೆ ಸಂಗಾತಿಯಾಗುವ ಸಾಸ್‌ವರೆಗೆ ಭಾರತೀಯ ಅಡುಗೆ ಖಾದ್ಯವೈವಿಧ್ಯಕ್ಕೆ ಹುಣಿಸೆಯ ಕೊಡುಗೆ ಅಪಾರ. ಪಾತ್ರೆಗಳು ಫಳಫಳ ಹೊಳೆಯುವಂತಾಗಬೇಕಾದರೆ ತಿಕ್ಕಲಿಕ್ಕೆ ಹುಣಿಸೆಯೇ ಆಗಬೇಕು. ಹುಣಿಸೆ ಮರದ ಚಿಗುರು ಎಲೆಗಳೂ ತಿನ್ನಲಿಕ್ಕೆ ಯೋಗ್ಯವೇ. ಅಂತೆಯೇ ಹುಣಿಸೆ ಬೀಜಗಳನ್ನು ಕೆಂಡದಲ್ಲಿ ಸುಟ್ಟು ತಿನ್ನುತ್ತಿದ್ದುದು, ಬಾಲ್ಯದಲ್ಲಿ ಶಾಲೆಗೆ ಹೋಗುವಾಗ ಪಾಟಿಚೀಲದಲ್ಲಿ ಹುಣಿಸೆಯ ಬೀಜಗಳೂ ಇರುತ್ತಿದ್ದದ್ದು, ಅವುಗಳನ್ನು ಕೊಡುಕೊಳ್ಳುವಿಕೆಗೆ ಕರೆನ್ಸಿಯಾಗಿ, ಕಲ್ಲಿಗೆ ಅಥವಾ ಸಿಮೆಂಟ್ ನೆಲಕ್ಕೆ ಉಜ್ಜಿ ಬಿಸಿಮಾಡಿ ಸಹಪಾಠಿಯ ಮೈಗೆ ಬಿಸಿ ಮುಟ್ಟಿಸುವ ಕುಚೋದ್ಯವಾಗಿ ಬಳಸುತ್ತಿದ್ದದ್ದು, ಕೊನೆಗೆ ಮನೆಯಲ್ಲಿ ಹಿರಿಯರಿಂದ ಛಡಿಯೇಟು ತಿನ್ನಲಿಕ್ಕೂ ಹುಣಿಸೆ ಮರದ್ದೇ ‘ಅಡಾರ್’ (ಇದು ಚಾಟಿ ಎಂಬರ್ಥದ ಪದ. ಕನ್ನಡದಲ್ಲಿದೆಯೋ ಗೊತ್ತಿಲ್ಲ. ಕರಾವಳಿಯಲ್ಲಿ ತುಳು, ಕೊಂಕಣಿ ಮತ್ತು ನಮ್ಮ ಚಿತ್ಪಾವನಿ ಮರಾಠಿಯಲ್ಲಿ ಬಳಕೆಯಲ್ಲಿದೆ. ಅಡಾರ್ ಅಂದರೆ ಚಾಟಿ ಎಂದಷ್ಟೇ ಅರ್ಥವಾದರೂ ಬಹುಮಟ್ಟಿಗೆ ಅದು ಹುಣಿಸೆ ಮರದ್ದೇ ಆಗಿರುವುದು, ನನಗನಿಸುತ್ತದೆ ಚುರುಕು ಮುಟ್ಟಿಸುವುದಕ್ಕೆ ಅದೇ ಬೆಸ್ಟ್ ಇರಬಹುದು)! ಓಹ್... ಹುಣಿಸೆ ಜೊತೆಗಿನ ಈಎಲ್ಲ ನೆನಪುಗಳು ಹುಳಿಯಲ್ಲ ಸಿಹಿಸಿಹಿ!

ಸಂಸ್ಕೃತದಲ್ಲಿ ಹುಣಿಸೆ ಹಣ್ಣಿಗೆ ತಿಂತ್ರಿಣಿ ಎನ್ನುತ್ತಾರೆ. ‘ತಿಂತ್ರಿಣೀ ಚಿಂಚಾಮ್ಲಿಕಾ...’ ಎಂದು ಅಮರಕೋಶ ವಾಕ್ಯ. ಅಂದರೆ ಚಿಂಚಾ ಮತ್ತು ಆಮ್ಲಿಕಾ ಸಹ ತಿಂತ್ರಿಣಿಯದೇ ಪರ್ಯಾಯ ನಾಮಗಳು. ಸಂಸ್ಕೃತದಲ್ಲಿ ಮಾತ್ರವಲ್ಲ, ಹಳೆಗನ್ನಡ ಮತ್ತು ನಡುಗನ್ನಡ ಕಾಲದಲ್ಲಿ ಮುಖ್ಯವಾಗಿ ಸಾಹಿತ್ಯರಚನೆಗಳಲ್ಲಿ ತಿಂತ್ರಿಣಿ ಪದಬಳಕೆ ಇದ್ದಿತ್ತೆಂದು ಕಾಣುತ್ತದೆ. ಪುಣ್ಯಕೋಟಿಯ ಪದ್ಯದಲ್ಲಿ ಕಾಳಿಂಗ ಗೊಲ್ಲನಿದ್ದ ಅರುಣಾದ್ರಿ ಬೆಟ್ಟದ ವರ್ಣನೆಯಲ್ಲಿ ಅಲ್ಲಿಯ ಮರಗಳ ಉಲ್ಲೇಖದಲ್ಲಿ ತಿಂತ್ರಿಣಿಯೂ ಬರುತ್ತದೆ: ‘ನಾಗಸಂಪಗೆ ಮಾವು ನೇರಳೆ। ತೇಗ ಚನ್ನಂಗಿ ಬನ್ನಿ ಪಾದರಿ। ಬಾಗೆ ತಿಂತ್ರಿಣಿ ಮತ್ತೆ ಬಿಲ್ವವು ತಾಗಿ ಮೆರೆದವರಣ್ಯದಿ...’ ಹಾಗೆಯೇ ಲಕ್ಷ್ಮೀಶ ಕವಿಯು ಸೀತೆಯ ವನವಾಸದ ವರ್ಣನೆಗೆಂದು ಗಂಗಾತೀರದಲ್ಲಿ ಕಂಡು ಬಂದ ಮರಗಳ ಪಟ್ಟಿ ಮಾಡಿದ್ದರಲ್ಲಿ ‘ತೆಂಗೆಳಗವುಂಗು ಪನಸಂ ದ್ರಾಕ್ಷೆ ಜಂಬು ನಾ। ರಂಗ ಜಂಬೀರ ಖರ್ಜೂರ ಕಿತ್ತಿಳೆ ಮಾತು। ಳಂಗ ತಿಂತ್ರಿಣಿ ಚೂತ ನೆಲ್ಲಿ ಬಿಲ್ವ ಕಪಿತ್ಥಮೆಂಬ ನಾನಾ ತರುಗಳು...’ ಎಲ್ಲ ಇವೆ! ನಮ್ಮೆಲ್ಲರ ನೆಚ್ಚಿನ ಪುರಂದರದಾಸರೂ ‘ಕ್ಷೀರ ಸಾಗರವ ಪೊಂದಿದವ ಮಥಿಸಿದ ನೀರು ಮಜ್ಜಿಗೆ ಕಾಣನೆ? ಚಾರು ಕಲ್ಪವೃಕ್ಷದಡಿಯಲ್ಲಿ ಕುಳಿತವಗೆ ದೊರೆ ತಿಂತ್ರಿಣಿ ಬಯಕೆಯೆ?’ ಎಂದು ಒಂದು ನಿಂದಾಸ್ತುತಿಯಲ್ಲಿ ಹೇಳಿದ್ದಾರೆ. ‘ವೃತ್ತಾದ ಗುಳ್ಳ ಫಲದುತ್ತಮೋತ್ತಮಶಾಕ ತಿಂತ್ರಿಣಿಯ ರಸಸಹಿತ ಪಾತ್ರದಲಿ ಬಡಿಸಿ ಸತ್ಪಾತ್ರನಾಗಿರುವ ಸರ್ವೋತ್ತಮಗೆ ಅರ್ಪಿಸಿದ ಭಕ್ತಿಯಿಂದ...’ ಅಂತ ಇನ್ನೊಂದು ಕೀರ್ತನೆಯಲ್ಲಿ ಬರುತ್ತದೆ. ಇದು ಬಹುಶಃ ಉಡುಪಿಯ ಜಗದ್ವಿಖ್ಯಾತ ಮಟ್ಟು–ಗುಳ್ಳದ ಹುಳಿ, ಸರಿಯಾದ ಪ್ರಮಾಣದಲ್ಲಿ ಬೆರೆಸಿದ ಹುಣಿಸೆ ಹಣ್ಣಿನ ಹುಳಿರಸದಿಂದ ರುಚಿಕರವಾಗಿರುವುದರ ವರ್ಣನೆ.

ಇನ್ನೂ ಒಂದು ವೆರಿ ಇಂಟೆರೆಸ್ಟಿಂಗ್ ತಿಂತ್ರಿಣಿ ಉಲ್ಲೇಖವೆಂದರೆ ‘ನಿಷಿಕ ತಿಂತ್ರಿಣಿ ಬೀಜದಿ ಸಾಲ ತಿದ್ದಿದ ಹಸ್ತ’ ಎಂದು ವಿಜಯದಾಸರು ಬರೆದ ಹಸ್ತಮಹಿಮಾ ಸ್ತುತಿಯಲ್ಲಿ ಬರುವುದು. ಹನುಮ–ಭೀಮ–ಮಧ್ವಾಚಾರ್ಯರು ವಾಯುದೇವರ ಅವತಾರಗಳು ಎಂಬ ನಂಬಿಕೆಯಿದೆಯಷ್ಟೆ? ಹಸ್ತಮಹಿಮಾ ಸ್ತುತಿಯಲ್ಲಿರುವುದು ಈ ಮೂರು ಅವತಾರಗಳ ಬಣ್ಣನೆ. ಅದರಲ್ಲಿ ಮಧ್ವಾಚಾರ್ಯರ ಮಹಿಮೆಯನ್ನು ಬಣ್ಣಿಸುವಾಗ ಈ ಸಾಲು ಬರುತ್ತದೆ. ಇದರ ಹಿಂದೊಂದು ಕುತೂಹಲಕರ ಕಥೆಯೂ ಇದೆ. ಮಧ್ವಾಚಾರ್ಯರ ಪೂರ್ವಾಶ್ರಮದ ಹೆಸರು ವಾಸುದೇವ ಭಟ್ಟ ಅಂತಿದ್ದುದು. ತಂದೆಯ ಹೆಸರು ಮಧ್ಯಗೇಹ ಭಟ್ಟ. ಒಮ್ಮೆ ಅವರಿಗೆ ದೈನಂದಿನ ಹೈನುಪದಾರ್ಥಗಳ ಪೂರೈಕೆಗೆಂದು ಧನಿಕನೊಬ್ಬನು ಹಸುವೊಂದನ್ನು ಮಾರಾಟ ಮಾಡಿದ್ದನು. ದುಡ್ಡು ಕೊಡುವಂತೆ ಅವರ ಮನೆಗೆ ಬಂದು ಧರಣಿ ಕುಳಿತಿದ್ದನು. ಕಡುಬಡವರಾಗಿದ್ದ ಮಧ್ಯಗೇಹ ಭಟ್ಟರಿಗೆ ಕೂಡಲೇ ಹಣ ಹೊಂದಿಸುವುದು ಕಷ್ಟವೇ ಆಗಿತ್ತು. ಆಗ ವಾಸುದೇವನು ತಾನು ಆಟವಾಡುತ್ತಿದ್ದ ಹುಣಿಸೆ ಬೀಜಗಳನ್ನು ಬೊಗಸೆಯಲ್ಲಿ ತುಂಬಿ ಧನಿಕನ ಹತ್ತಿರ ತಂದು ‘ತಂದೆಯವರು ನಿಮಗೆ ಕೊಡಬೇಕಿದ್ದ ಹಣದ ಬದಲಿಗೆ ನಾನಿದನ್ನು ನಿಮಗೆ ನೀಡುವೆ’ ಎಂದು ಕೊಟ್ಟನು. ಆ ಧನಿಕನು ಚೆಂದದ ಮುದ್ದುಮುಖದ ವಾಸುದೇವನನ್ನು ಕಂಡು ಆನಂದದಿಂದ ಆ ಬೀಜಗಳನ್ನು ತೆಗೆದುಕೊಂಡು ಹೋದನು. ಮನೆಗೆ ಹೋಗಿ ಆ ಬೀಜಗಳನ್ನು ನೋಡಿದಾಗ ಅದು ಬಂಗಾರವಾಗಿತ್ತು! ಕೆಲ ದಿನಗಳ ಬಳಿಕ ಮಧ್ಯಗೇಹ ಭಟ್ಟರು ಹಣ ಕೊಡಲು ಹೋದಾಗ, ಧನಿಕನು ತನಗೆ ಬರಬೇಕಾದ ಹಣ ಆಗಲೇ ಬಂದಾಯಿತು ಎಂದು ತಿಳಿಸಿದನು. ಹೀಗೆ ಪವಾಡಸದೃಶ ಹುಣಿಸೆ ಬೀಜಗಳನ್ನು ವಾಸುದೇವನು ನೀಡಿದ ಸ್ಥಳದಲ್ಲಿ ಈಗಲೂ ಒಂದು ಹುಣಿಸೆ ಮರವಿದೆ, ಉಡುಪಿ ಬಳಿಯ ಪಾಜಕ ಕ್ಷೇತ್ರದಲ್ಲಿ.

ಅದಷ್ಟು ತಿಂತ್ರಿಣಿ ಪುರಾಣ ಆದಮೇಲೆ, ಹುಣಿಸೆ ಹಣ್ಣಿನ ಇಂಗ್ಲಿಷ್ ಹೆಸರಲ್ಲೂ, ಸಸ್ಯಶಾಸ್ತ್ರೀಯ ಹೆಸರಲ್ಲೂ, ಭಾರತದ ಪಾತ್ರವಿದೆಯೆಂದರೆ ನೀವು ನಂಬಲೇಬೇಕು! ಹುಣಿಸೆ ಹಣ್ಣು ಭಾರತದಿಂದಲೇ ಪಶ್ಚಿಮದ ದೇಶಗಳಿಗೆ ಹೋದದ್ದು ಎಂದು ಹೇಳಲಾಗಿದೆ. ವ್ಯಾಪಾರಕ್ಕೆ ಬಂದಿದ್ದ ಅರಬರೇ ಅದನ್ನೊಯ್ದಿದ್ದು. ಹುಣಿಸೆ ಹಣ್ಣು ನೋಡುವುದಕ್ಕೆ ಅರಬರ ದೇಶದ ಖರ್ಜೂರದ ಹಣ್ಣಿನ ಹಾಗೆ ಇದೆ. ಖರ್ಜೂರಕ್ಕೆ ಅರಬ್ಬೀ ಭಾಷೆಯಲ್ಲಿ ತಮರ್ ಎಂದು ಹೆಸರು. ಅವರು ಹುಣಿಸೆ ಹಣ್ಣನ್ನು ತಮರ್–ಹಿಂದ್ ಅಂದರೆ ಹಿಂದೂಸ್ತಾನದ ಖರ್ಜೂರ ಎಂದು ಕರೆದರು. ಅದು ಇಂಗ್ಲಿಷರ ಭಾಷೆಯಲ್ಲಿ ಟ್ಯಾಮರಿಂಡ್ ಆಯ್ತು. ಸಸ್ಯಶಾಸ್ತ್ರೀಯ ನಾಮಕರಣದ ವೇಳೆ ‘ಟ್ಯಾಮರಿಂಡಸ್ ಇಂಡಿಕಾ’ ಆಯ್ತು,

Nutty & Fruity
A DELICIOUS WAY TO LIVE HEALTHY
Chili
TAMARIND
BITES
MADE WITH REAL FRUIT

ಮಾವಿನಹಣ್ಣು ‘ಮ್ಯಾಂಗಿಫೆರಾ ಇಂಡಿಕಾ’ ಆದಹಾಗೆ! ಪಾಶ್ಚಾತ್ಯ ಜಗತ್ತಿನಲ್ಲಿ ಟ್ಯಾಮರಿಂಡ್‌ಅನ್ನು ಇಂಡಿಯಾದೊಡನೆ ಎಷ್ಟು ಸಮೀಕರಿಸಲಾಗಿದೆಯೆಂದರೆ ಟ್ಯಾಮರಿಂಡ್ ಹೆಸರಿನ ಇಂಡಿಯನ್ ರೆಸ್ಟೊರೆಂಟ್‌ಗಳೂ ಇವೆ! ನಾನಿರುವ ವಾಷಿಂಗ್ಟನ್ ಡಿಸಿ ಪ್ರದೇಶದಲ್ಲಿಯೇ ‘ದ ಟ್ಯಾಮರಿಂಡ್ ಇಂಡಿಯನ್ ಕ್ಯುಸಿನ್’ ಎಂಬ ಹೆಸರಿನ ಒಂದು ಇಂಡಿಯನ್ ರೆಸ್ಟೊರೆಂಟ್ ಇದೆ. ಟ್ಯಾಮರಿಂಡ್ ಇಲ್ಲದ ಇಂಡಿಯನ್ ಕ್ಯುಸಿನ್ ಊಹಿಸಲೂ ಅಸಾಧ್ಯ. ‘ದ ಸಿಂಪಲ್ ಜಾಯ್ಸ್ ಆಫ್ ಟ್ಯಾಮರಿಂಡ್’ ಎಂಬ ಶೀರ್ಷಿಕೆಯ ಲಲಿತಪ್ರಬಂಧವೊಂದು ಒಂದೆರಡು ವರ್ಷಗಳ ಹಿಂದೆ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಬರೆದವರು ಒಬ್ಬ ನ್ಯೂಯಾರ್ಕ್ ನಿವಾಸಿ ಭಾರತೀಯರೇ. ‘ನಾನು ಬಾಲ್ಯದಲ್ಲಿ ಭಾರೀ ತುಂಟನೆಂದು ಹೆಸರಾಗಿದ್ದವನಲ್ಲವಾದರೂ ತಕ್ಕಮಟ್ಟಿಗೆ ಪೋಕ್ರಿ ಕೆಲಸಗಳನ್ನು ಮಾಡಿ ಹೆತ್ತವರನ್ನು ತುದಿಗಾಲಲ್ಲಿರಿಸುತ್ತಿದ್ದೆ. ಅದರಲ್ಲೂ ಬೇಸಗೆ ರಜೆಯಲ್ಲಿ ನನ್ನ ಉಪದ್ವ್ಯಾಪಗಳು ಹೆಚ್ಚುತ್ತಿದ್ದುವು. ಮುಂಬೈಯಲ್ಲಿ ನಮ್ಮ ಮನೆಯ ನೆರೆಕೆರೆಯಲ್ಲಿದ್ದ ಹುಣಿಸೆ ಮರಗಳ ಮೇಲೆ ಹತ್ತುವುದು, ಹುಣಿಸೆ ಕೋಡುಗಳು ಕೈಗೆ ತಾಕುವಂತಿಲ್ಲದಿದ್ದರೆ ಕೋಲಿನಿಂದಲೋ ಕಲ್ಲು ಬಿಸಾಡಿಯೋ ಬೀಳಿಸುವುದು. ನೆರೆಮನೆಯವರ ದೂರುಗಳು, ಹೆತ್ತವರಿಂದ ಖಡಕ್ ಎಚ್ಚರಿಕೆಗಳು, ಮೊಣಕಾಲು–ಕೈಗಳಿಗೆ ತರಚಿದ ಗಾಯಗಳು... ಇವೆಲ್ಲವೂ ಗೌಣವೆನಿಸುತ್ತಿದ್ದವು ಸಾಹಸ ಮಾಡಿ ಕದ್ದು ತಿನ್ನುತ್ತಿದ್ದ ಆ ಹುಣಿಸೆ ಹಣ್ಣಿನ ರುಚಿಯ ಮುಂದೆ!’ ಎಂದು ತಮ್ಮ ಬಾಲ್ಯವನ್ನು ನೆನಪಿಸಿಕೊಳ್ಳುತ್ತ ಹುಣಿಸೆಯ ವಿಶ್ವರೂಪವನ್ನು ಆ ಲೇಖನದಲ್ಲಿ ಅವರು ವಿಶ್ವಕ್ಕೆ ಪರಿಚಯಿಸಿದ್ದು ಆಪ್ಯಾಯಮಾನವಾಗಿತ್ತು.

ಅದೆಲ್ಲ ಇರಲಿ, ಈ ವಾರದ್ದು ತಿಂತ್ರಿಣಿ ತೋರಣ ಆಗಲಿಕ್ಕೆ ಏನು ಕಾರಣ ಏನು ಪ್ರೇರಣೆ ಎನ್ನುವುದನ್ನು ಬೇಂದ್ರೆಯವರ ಒಂದು ಕವಿತೆಯ ಮೂಲಕ ಈಗ ನಿಮಗೆ ವಿವರಿಸುತ್ತೇನೆ. ಸಖೀಗೀತ ಕವನಸಂಕಲನದಲ್ಲಿರುವ ಈ ಕವಿತೆಯ ಶೀರ್ಷಿಕೆ ‘ಹೂತsದ ಹುಣಸಿ’. ಅಂದರೆ, ಹೂವು ಅರಳಿರುವ ಹುಣಿಸೆ ಮರ ಅಂತ ಧಾರ್ವಾಡ್ ಭಾಷೆಯಲ್ಲಿ. ‘ಹೂತsದ ಹುಣಸಿಯಾ ಚಿಗುರು। ಮದರಂಗಿ ಬಣ್ಣದುಗುರು। ರುಚಿಗೆ ಹುಳಿಯೊಗರು। ನೋಡ್ಯೆ ಜೀವಕ್ಕನಿಸಿತs ಹಗುರು’ ಎಂದು ಕವಿತೆ ಆರಂಭವಾಗುತ್ತದೆ. ಕಡು ಬೇಸಿಗೆಯಲ್ಲಿ ತನ್ನ ಹೊಲದ ಕಡೆಗೆ ತೆರಳುತ್ತಿದ್ದ ಹಳ್ಳಿಗನೊಬ್ಬನು ಹೂವು ಬಿಟ್ಟಂಥ ಹುಣಸಿಯ ಮರವನ್ನು ನೋಡಿದಾಗ, ಅದರಲ್ಲಿ ಚೆಲುವಿಕೆಯನ್ನು ಗುರುತಿಸುವ, ಆ ಚೆಲುವಿನಲ್ಲೇ ಪರವಶನಾಗುವ, ಹಾಗೆಯೇ ಹಗಲುಗನಸಿನಲ್ಲಿ ತೇಲಿ ಹೋಗುವ ಚಿತ್ರವನ್ನು ಈ ಕವನದಲ್ಲಿ ನೀಡಲಾಗಿದೆ... ಎಂದು ಬರೆದಿದ್ದಾರೆ ಹಿರಿಯ ಮಿತ್ರ ಸುಧೀಂದ್ರ ದೇಶಪಾಂಡೆಯವರು ‘ಸಲ್ಲಾಪ’ ಬ್ಲಾಗ್‌ನಲ್ಲಿ, ಬೇಂದ್ರೆಯವರ ಕವಿತೆಗಳ ಸುದೀರ್ಘ ಸವಿವರ ಸ್ವಾರಸ್ಯಕರ ವ್ಯಾಖ್ಯಾನಕ್ಕಾಗಿ ನಾನು ಆಗಾಗ ಪರಾಮರ್ಶಿಸುವ ಬ್ಲಾಗ್ ಅದು. ಪ್ರಸ್ತುತ ಈ ಕವಿತೆಯನ್ನೂ ಅಲ್ಲಿ ಬಹಳ ಚೆನ್ನಾಗಿ ವ್ಯಾಖ್ಯಾನಿಸಿದ್ದಾರೆ. ಹುಣಿಸೆ ಮರ ಆ ಹಳ್ಳಿಗನ ಪಂಚೇಂದ್ರಿಯಗಳಿಗೂ ಹೇಗೆ ಮುದ ಕೊಡುತ್ತದೆಂಬುದನ್ನು ಬೇಂದ್ರೆಯವರು ಬರೆದ ರೀತಿ ಬೇಂದ್ರೆಯವರಿಗೆ ಬೇಂದ್ರೆಯವರೇ ಸಾಟಿ ಎಂದು ಮತ್ತೊಮ್ಮೆ ಹೇಳುವಂತಿದೆ.

ಕವಿತೆಯ ಕೊನೆ ಚರಣ ಅತ್ಯಂತ ಮಾರ್ಮಿಕ. ‘ಕವಿ ಜೀವದ ಬ್ಯಾಸರ ಹರಿಸಾಕ। ಹಾಡ ನುಡಿಸಾಕ। ಹೆಚ್ಚಿಗೇನು ಬೇಕ?। ಒಂದು ಹೂತ ಹುಣಸಿಮರ ಸಾಕ॥’ ಕವಿಗೆ ಮತ್ತು ರಸಿಕರಿಗೆ ಸುಖ ನೀಡಲಿಕ್ಕೆ ಅದು–ಇದು ಇಂಥದ್ದು–ಅಂಥದ್ದೇ ಬೇಕು ಅಂತೇನಿಲ್ಲ. ಹೂವು ಬಿಟ್ಟ ಹುಣಸಿ ಮರ ಕೂಡ ಸಾಕಾಗುತ್ತದೆ! ಇದಕ್ಕೆ ಸಂಬಂಧಿಸಿದಂತೆ ಒಂದು ಸ್ವಾರಸ್ಯಕರ ಘಟನೆಯನ್ನೂ ದೇಶಪಾಂಡೆ ಅವರು ಅಲ್ಲಿ ದಾಖಲಿಸಿದ್ದಾರೆ: ಗದಗಿನಲ್ಲಿ ನಡೆಯುತ್ತಿದ್ದ ಒಂದು ಸಾಹಿತ್ಯ ಸಮಾರಂಭದ ವೇದಿಕೆಯ ಮೇಲೆ ಬೇಂದ್ರೆ ಮಾಸ್ತರರು, ಆರ್.ಸಿ. ಹಿರೇಮಠ ಹಾಗೂ ರಾ.ಯ. ಧಾರವಾಡಕರ ಉಪಸ್ಥಿತರಿದ್ದರು. ಹಿರೇಮಠರು ಬೇಂದ್ರೆಯವರಿಗೆ ಚೇಷ್ಟೆ ಮಾಡುವ ಉದ್ದೇಶದಿಂದಲೇ ‘ಬೇಂದ್ರೆ ಅವರು ಬೇಕಾದ್ದರ ಮ್ಯಾಲೆ ಕವನಾ ಬರೀತಾರ; ಇಕಾ ನೋಡರಿ, ಆ ಎದುರಿಗಿರೋ ಹುಣಸಿ ಮರದ ಮ್ಯಾಲೂ ಒಂದ ಕವನಾ ಕಟ್ಟತಾರ ಅವರು!’ ಎಂದು ಅಂದರಂತೆ. ತತ್‌ಕ್ಷಣವೇ ಬೇಂದ್ರೆಯವರು ಎದ್ದು ನಿಂತು, ಹಸ್ತಚಲನೆ ಮಾಡುತ್ತ ಉದ್ಗರಿಸಿದರಂತೆ: ‘ಕವಿಗೇನು ಬೇಕs ಹೂತ ಹುಣಸಿ ಮರ ಸಾಕs!’

ಬೇಂದ್ರೆಯವರ ಪಾದಧೂಳಿಗೂ ಸಮವಲ್ಲದ ನಮ್ಮಂಥ ಪಾಮರರಿಗೂ ಅಕ್ಷರ ಕೆತ್ತಲಿಕ್ಕೆ ಹುಣಿಸೆ ಪ್ರೇರಣೆಯಾಗಬಹುದು! ಹೀಗನಿಸಿದ್ದು ಇತ್ತೀಚೆಗೆ ನಾನು ಕೊಂಡುತಂದು ಸವಿಯುತ್ತಿರುವ ‘ಚಿಲಿ ಟ್ಯಾಮರಿಂಡ್ ಬೈಟ್ಸ್’ನಿಂದ. ಇದು ನನಗೆ ಸಿಕ್ಕಿದ್ದು ಇಲ್ಲಿಯ ರಖಂ ಮಳಿಗೆ ‘ಕಾಸ್ಟ್‌ಕೊ’ದಲ್ಲಿ. ಅದೇನಾಯ್ತೆಂದರೆ, ಕಾಸ್ಟ್‌ಕೊ ಗ್ರಾಹಕರ ಒಂದು ಫೇಸ್‌ಬುಕ್ ಗ್ರೂಪ್ ಇದೆ. ಇತ್ತೀಚೆಗೆ ಅದರಲ್ಲೊಂದು ದಿನ ಯಾರೋ ಒಬ್ಬರು ಗ್ರಾಹಕರು (ಅಮೆರಿಕನ್ನರೇ) ಚಿಲಿ ಟ್ಯಾಮರಿಂಡ್ ಬೈಟ್ಸ್ ಪ್ಯಾಕೆಟ್‌ನದೊಂದು ಚಿತ್ರ ಪೋಸ್ಟ್ ಮಾಡಿದ್ದರು. ಅದು ಕಾಸ್ಟ್‌ಕೊದಲ್ಲಿ ಯಾವಾಗ ಬೇಕೆಂದರೂ ಸಿಗುವ ಉತ್ಪನ್ನವಲ್ಲ, ಸೀಸನಲ್ ಆಗಿ ಅಪರೂಪಕ್ಕೊಮ್ಮೆ ಬಂದಿರುತ್ತದೆ. ಹಾಗಾಗಿಯೇ ಇತರರಿಗೂ ತಿಳಿಸಲಿಕ್ಕೆಂದು ಪೋಸ್ಟ್ ಮಾಡಿದ್ದರು. ಆ ಪೋಸ್ಟ್ ನೋಡಿ ಅನೇಕರಿಗೆ ಬಾಯಿಯಲ್ಲಿ ನೀರೂರಿತೆಂದೂ, ಕೂಡಲೇ ಕಾಸ್ಟ್‌ಕೊಗೆ ಹೋಗಿ ಕೊಂಡುತಂದರೆಂದೂ, ಅದಕ್ಕೆ ಬಂದ ಪ್ರತಿಕ್ರಿಯೆಗಳಿಂದಲೇ ಗೊತ್ತಾಗುತ್ತಿತ್ತು. ಪ್ರತಿಕ್ರಿಯೆ ಬರೆಯಲಿಲ್ಲವಾದರೂ ಆಮೇಲಿನ ಕಾಸ್ಟ್‌ಕೊ ಟ್ರಿಪ್‌ನಲ್ಲಿ ಚಿಲಿ ಟ್ಯಾಮರಿಂಡ್ ಬೈಟ್ಸ್ ಪ್ಯಾಕೆಟನ್ನು ನಾನೂ ಶಾಪಿಂಗ್‌ಕಾರ್ಟ್‌ನಲ್ಲಿ ಸೇರಿಸಿಕೊಂಡೆ. ಒಂಬತ್ತು ಡಾಲರ್ ಬೆಲೆ ಅಷ್ಟೇನೂ ದುಬಾರಿಯಲ್ಲವೆನಿಸಿತು. ಪ್ಯಾಕೆಟ್ ಮೇಲೆ ‘ಪ್ರಾಡಕ್ಟ್ ಆಫ್ ಥೈಲ್ಯಾಂಡ್’ ಅಂತ ಇದ್ದುದನ್ನೋದಿ, ಅಲ್ಲಿಂದ ಆಮದಾಗಿರುವುದಕ್ಕೆ ಇಷ್ಟು ಬೆಲೆ ಧಾರಾಳವಾಗಿ ಕೊಡಬಹುದೆಂದು ತೀರ್ಮಾನಿಸಿದೆ. ಮನೆಗೆ ತಂದು ಪ್ಯಾಕೆಟ್ ತೆರೆದು ಒಂದು ಬೈಟ್ ಬಾಯಿಗೆ ಹಾಕಿದಾಗ ಅನಿಸಿದ್ದು ಇದಕ್ಕೆ ಒಂಬತ್ತಲ್ಲ ಹದಿನೆಂಟು ಡಾಲರ್ ಕೊಟ್ಟರೂ ವರ್ತ್ ಇಟ್ ಅಂತ. ಅಷ್ಟೂ ಒಳ್ಳೆಯ ರುಚಿ! ಅದರಲ್ಲೂ ರುಚಿಗಳ ಪೈಕಿ ಹುಳಿಯತ್ತ ತುಸು ಹೆಚ್ಚೇ ಒಲವಿರುವ ನನ್ನಂಥವರಿಗೆ ಸುಪರ್ ಬೆಸ್ಟ್. 'Tropical, sweet, spicy are a few words that can describe Nutty & Fruity Chili Tamarind, but words aren't enough to describe the spicy explosion of flavors that are in every bite! We start off using the highest quality tamarind, bursting with tropical flavors, and combine it with our signature spice blend. Many years have gone into creating the perfect balance of spicy-sweet-tanginess in our Chili Tamarind! Give us a try and see why Nutty - Fruity Chili Tamarind reigns supreme!' ಎಂದು ಪ್ಯಾಕೆಟ್ ಮೇಲೆ ಬರೆದಿರುವುದು ಅಕ್ಷರಶಃ ಅನುಭವಕ್ಕೆ ಬರುತ್ತದೆ, ಅದಕ್ಕೇ ಎಡಿಕ್ಟ್ ಆಗುವಷ್ಟು!

ಚಿಲಿ ಟ್ಯಾಮರಿಂಡ್ ಬೈಟ್ಸ್ ಸವಿಯುವಾಗೆಲ್ಲ ನನಗೆ ಐದಾರು ವರ್ಷಗಳ ಹಿಂದೊಮ್ಮೆ ಇಲ್ಲಿ ಅಮೆರಿಕದಲ್ಲೇ ಮೊತ್ತಮೊದಲ ಬಾರಿಗೆ ಪರಿಚಯವಾದ ಹುಣಿಸೆ ‘ಚಿಗಳಿ’ ಸಹ ನೆನಪಾಗುತ್ತದೆ. ಅಲ್ಲಿಯವರೆಗೆ ನನಗೆ ಚಿಗಳಿಯ ಹೆಸರು ಕೇಳಿ ಗೊತ್ತಿತ್ತೇ ವಿನಾ ಅದು ತಿನ್ನಲಿಕ್ಕೆ ಹೇಗಿರುತ್ತದೆಂದು ಗೊತ್ತಿರಲಿಲ್ಲ. ‘ಒಂದು ಬಂಡೀಲಿ ವೀಳ್ಳೆದಡ್ಡೆ ಒಂದು ಬಂಡೀಲಿ ಚಿಗಳೀ ತಂಬ್ಟ...’ ಎಂದು ಜನಪದ ಗೀತೆಯಲ್ಲಿ ಕೇಳಿದಾಗೆಲ್ಲ ಇದರಲ್ಲಿ ತಂಬಿಟ್ಟು ಚೆನ್ನಾಗಿ ಗೊತ್ತು, ಚಿಗಳಿ ಅಂದರೆ ಹೇಗಿರಬಹುದು? ಎಂಬ ಕುತೂಹಲ ನನ್ನಲ್ಲಿರುತ್ತಿತ್ತು. ಆ ವರ್ಷ ಹುಬ್ಬಳ್ಳಿಯ ಸಾಹಿತ್ಯ ಪ್ರಕಾಶನದ ಸುಬ್ರಹ್ಮಣ್ಯ ಅವರು ಯಶವಂತ ಸರದೇಶಪಾಂಡೆಯವರನ್ನೂ ಜೊತೆಗೊಂಡು ಅಮೆರಿಕ ಪ್ರವಾಸ ಮಾಡಿದ್ದಾಗ, ಇಲ್ಲಿ ಬಾಲ್ಟಿಮೋರ್‌ನಲ್ಲಿದ್ದ ಅವರ ಮಗಳು ರೋಶನಿಯ ಮನೆಗೆ ಬಂದಿದ್ದಾಗ, ನಾನವರನ್ನು ಭೇಟಿಯಾಗಿದ್ದೆ. ಆಗ ಅವರು ಉತ್ತರ ಕರ್ನಾಟಕದ ಅಥೆಂಟಿಕ್ ಹುಣಿಸೆ ಚಿಗಳಿಯನ್ನು ನನಗೂ ಕೊಟ್ಟಿದ್ದರು. ಬೇರೇನೋ ಸ್ವೀಟ್ಸ್ ಸಹ ಕೊಟ್ಟಿದ್ದರಾದರೂ ನನಗೆ ಅಗ್ದೀ ಇಷ್ಟ ಆದದ್ದು ಚಿಗಳಿಯೇ. ಲವ್ ಎಟ್ ಫಸ್ಟ್ ಸೈಟ್ ಅಲ್ಲ, ಲವ್ ಎಟ್ ಫಸ್ಟ್ ಬೈಟ್! ರುಚಿ ಹತ್ತಿದ ಮೇಲೆ, ನನಗೆ ಇನ್ನೂ ಸ್ವಲ್ಪ ಕೊಡುತ್ತೀರಾ ಎಂದು ಯಾವುದೇ ಮುಜುಗರವಿಲ್ಲದೆ ಸುಬ್ರಹ್ಮಣ್ಯರಲ್ಲಿ ಕೇಳಿ ಮತ್ತಷ್ಟು ಪಡೆದು ಸವಿದಿದ್ದೆ. ನಮ್ಮೂರಿನ ಸ್ಪೆಷಲ್ ನಿಮಗೂ ಇಷ್ಟವಾಯ್ತಲ್ಲ ಎಂದು ಅವರೂ ಸಂತೋಷದಿಂದಲೇ ಕೊಟ್ಟಿದ್ದರು. ಅದನ್ನು ನೆನಪಿಸಿಕೊಂಡರೆ ಈಗಲೂ ಬಾಯಿಯಲ್ಲಿ ನೀರೂರುತ್ತದೆ. ಅಂತಹ ಚಿಗಳಿಗೆ ಸರಿಸಾಟಿಯೆನಿಸುವ ಚಿಲಿ ಟ್ಯಾಮರಿಂಡ್ ಬೈಟ್ಸ್ ಈಗ ಸಿಕ್ಕಿರುವುದು ನನಗೆ ತುಂಬ ಖುಷಿಯಾಗಿದೆ. ಖುಷಿಯಾದಾಗ ಎಲ್ಲರಿಗೂ ಸಿಹಿ ಹಂಚಿ ಖುಷಿಯನ್ನು ಹೆಚ್ಚಿಸಿಕೊಳ್ಳುವುದು ಲೋಕರೂಢಿ, ಮಾಮೂಲಿ ಸಂಗತಿ. ಸಿಹಿಯೇ ಆಗಬೇಕಿಲ್ಲ, ಹುಳಿಯನ್ನೂ ಹಂಚಬಹುದು ಎಂಬ ಆಲೋಚನೆ ಬರುವುದು ಮತ್ತು ಅನುಷ್ಠಾನಗೊಳ್ಳುವುದು ಬಹುಶಃ ತಿಳಿರುತೋರಣ ಅಂಕಣದಲ್ಲಿ ಮಾತ್ರ!